0204/0623

**II Semester 3 Years LL.B./VI Semester 5 Years B.A. LL.B. /B.B.A. LL.B.**
**Examination, June/July 2015**
**ADMINISTRATIVE LAW**

Duration : 3 Hours Max. Marks : 100

**Instructions** : 1. Answer Q.No. **9** and **any five** of the **remaining** questions.

2. Q.No. **9** carries **20** marks and the **remaining** questions carry **16** marks **each**.

3. Answers should be written either in **English** or in **Kannada** completely.

**ಸೂಚನೆಗಳು** : 1. ಪ್ರಶ್ನೆ **9**ಕ್ಕೆ ಉತ್ತರಿಸಿರಿ ಹಾಗೂ ಉಳಿದ ಯಾವುದಾದರೂ **ಐದು** ಪ್ರಶ್ನೆಗಳಿಗೆ ಉತ್ತರಿಸಿರಿ.

2. ಪ್ರಶ್ನೆ **9**ಕ್ಕೆ **20** ಅಂಕಗಳು ಉಳಿದ **ಪ್ರತಿ** ಪ್ರಶ್ನೆಗಳಿಗೆ **16** ಅಂಕಗಳು.

3. ಉತ್ತರವನ್ನು ಸಂಪೂರ್ಣವಾಗಿ **ಇಂಗ್ಲೀಷ್** ಅಥವಾ **ಕನ್ನಡ**ದಲ್ಲಿ ಬರೆಯಿರಿ.

Q. No. 1. " The study of Administrative law is not an end in itself but a means to an end". Examine. How does it differ from constitutional law. Marks : 16

''ಆಡಳಿತ ಕಾನೂನಿನ ಅಧ್ಯಯನವು ಕೇವಲ ಒಂದು ಗುರಿಯಲ್ಲ, ಅದು ಗುರಿಗಳನ್ನು ಈಡೇರಿಸುವ ಒಂದು ಸಾಧನ'' ಪರೀಕ್ಷಿಸಿ. ಆಡಳಿತ ಕಾನೂನು ಸಂವಿಧಾನ ಕಾನೂನಿನಿಂದ ಹೇಗೆ ಭಿನ್ನವಾಗಿದೆ ? Marks : 16

Q. No. 2. Examine the role of Administrative legislation in a progressive democratic society. What are the limits on delegation of legislative powers ? Marks : 16

ಅಭಿವೃದ್ಧಿಯುತ ಪ್ರಜಾಪ್ರಭುತ್ವ ಸಮಾಜದಲ್ಲಿ ಆಡಳಿತಾತ್ಮಕ ಕಾನೂನಿನ (ಪ್ರತ್ಯಾಯೋಜಿತ ಕಾನೂನು) ಪಾತ್ರವನ್ನು ಪರೀಕ್ಷಿಸಿ. ಪ್ರತ್ಯಾಯೋಜಿತ ಶಾಸನದ ವ್ಯವಸ್ಥೆಯ ಮೇಲೆ ಇರುವ ಮಿತಿಗಳೇನು ? Marks : 16

Q. No. 3. What is Administrative Adjudication ? Explain the problems of Administrative Adjudication in India. Marks : 16

ಆಡಳಿತಾತ್ಮಕ ನ್ಯಾಯಾದಾನ ಎಂದರೇನು ? ಭಾರತದಲ್ಲಿ ಆಡಳಿತಾತ್ಮಕ ನ್ಯಾಯದಾನ ವ್ಯವಸ್ಥೆಯಲ್ಲಿರುವ ಲೋಪದೋಷಗಳನ್ನು ವಿವರಿಸಿ. Marks : 16

P.T.O.

Q. No. 4. What is mandamus ? Discuss the grounds for the issue of mandamus with limitations. Marks : 16

ಮ್ಯಾಂಡಮಸ್ ಎಂದರೇನು ? ಯಾವ ಸಂದರ್ಭಗಳಲ್ಲಿ ಮ್ಯಾಂಡಮಸ್ ಆದೇಶವನ್ನು ಜಾರಿ ಮಾಡಬಹುದು ಎಂಬುದನ್ನು ಮಿತಿಗಳೊಂದಿಗೆ ಚರ್ಚಿಸಿ. Marks : 16

Q. No. 5. What are essentials of a government contract ? Explain the liability of government in contracts with decided cases. Marks : 16

ಸರ್ಕಾರದ ಕರಾರಿನ ಅವಶ್ಯಕ ಲಕ್ಷಣಗಳೇನು ? ಸರ್ಕಾರದ ಕರಾರಿನಲ್ಲಿನ ಬಾಧ್ಯತೆಗಳನ್ನು ನಿರ್ಧರಿತ ಪ್ರಕರಣಗಳೊಂದಿಗೆ ವಿವರಿಸಿರಿ. Marks : 16

Q. No. 6. Discuss the concept of "Fair Hearing" with the help of decided cases. State the exceptions. Marks : 16

''ನ್ಯಾಯ ಸಮ್ಮತ ಸುನಾವಣೆ'' ಎಂಬ ಸಿದ್ಧಾಂತವನ್ನು ತೀರ್ಮಾನಿಸಲ್ಪಟ್ಟ ಪ್ರಕರಣಗಳೊಂದಿಗೆ ಚರ್ಚಿಸಿರಿ. ಈ ಸಿದ್ಧಾಂತಕ್ಕಿರುವ ಅಪವಾದಗಳನ್ನು ತಿಳಿಸಿ. Marks : 16

Q. No. 7. Discuss the various controls over the working of Public Corporatons in India. Marks : 10

ಭಾರತದಲ್ಲಿ ಸಾರ್ವಜನಿಕ ನಿಗಮಗಳ ಕಾರ್ಯನಿರ್ವಹಣೆ ಮೇಲೆ ಇರುವ ವಿವಿಧ ನಿಯಂತ್ರಣಗಳನ್ನು ಚರ್ಚಿಸಿರಿ. Marks : 16

Q. No. 8. Write short note on **any two** of the following : Marks : 2×8=16

ಈ ಕೆಳಗಿನ ಯಾವುದಾದರೂ **ಎರಡರಲ್ಲಿ** ಟಿಪ್ಪಣಿ ಬರೆಯಿರಿ.

a) Administrative Discretion.

ಆಡಳಿತಾತ್ಮಕ ವಿವೇಚನೆ.

b) Central Vigilance Commission.

ಕೇಂದ್ರೀಯ ಜಾಗ್ರತ ಆಯೋಗ.

c) Lokayukta in Karnataka.

ಕರ್ನಾಟಕದಲ್ಲಿ ಲೋಕಾಯುಕ್ತ.

Q. No. 9. Solve **any two** of the following problems : Marks : 2×10=20

ಈ ಕೆಳಗಿನ ಯಾವುದಾದರೂ **ಎರಡು** ಸಮಸ್ಯೆಗಳನ್ನು ತೀರ್ಮಾನಿಸಿ.

a) The Delhi Corporation Act, 1957 in Section 92 (1) provided that all persons drawing salary less than Rs. 6,000/- p.m. will be appointed by the General Manager of the Delhi Transport undertaking. S.95 further provided that no person can be dismissed by any authority subordinate to the appointing authority. The General Manager framed a rule under the Act and deligated his power to the Assistant General Manager. A driver drawing salary less than Rs. 6,000/- p.m. was dissmissed by the AGM. The aggrieved driver challenged the rule and action. Decide.

ದೆಹಲಿ ಕಾರ್ಪೊರೇಶನ್ ಕಾಯ್ದೆ 1957 ರ ಕಲಂ 92 (1) ರ ಪ್ರಕಾರ ಮಾಸಿಕ ರೂ. 6,000/- ಕ್ಕಿಂತ ಕಡಿಮೆ ವೇತನ ಹೊಂದಿರುವ ಯಾವುದೇ ನೌಕರರನ್ನು ದೆಹಲಿ ಸಾರಿಗೆ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕರು ನೇಮಕ ಮಾಡಬೇಕಾಗುತ್ತದೆ. ಕಲಂ 95 ರ ಪ್ರಕಾರ ಯಾವುದೇ ನೌಕರನನ್ನು ಮಾಡುವುದಿದ್ದರೆ ಅದು ನೇಮಕಾತಿ ಮಾಡಿದ ಅಧಿಕಾರಿ ಹೊರತು ಅಧೀನ ಅಧಿಕಾರಿಯಿಂದ ಸಾಧ್ಯವಿರುವುದಿಲ್ಲ. ಸಾರಿಗೆ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕರು ಒಂದು ನಿಯಮವನ್ನು ಮಾಡಿ ಅದರಂತೆ ಅವರಲ್ಲಿರುವ ಅಧಿಕಾರವನ್ನು ಸಹಾಯಕ ಪ್ರಧಾನ ವ್ಯವಸ್ಥಾಪಕರಿಗೆ ಪ್ರತ್ಯಾಯೋಜನೆ ಮಾಡುವರು. ಸಂಸ್ಥೆಯ ಒಬ್ಬ ಚಾಲಕನು ರೂ. 6,000/- ಕ್ಕಿಂತ ಕಡಿಮೆ ಮಾಸಿಕ ವೇತನ ಪಡೆಯುತ್ತಿದ್ದು ಆತನನ್ನು ಸಹಾಯಕ ಪ್ರಧಾನ ವ್ಯವಸ್ಥಾಪಕರು ಸೇವೆಯಿಂದ ವಜಾಮಾಡುವರು. ನೊಂದ ಚಾಲಕನು ಈ ಕ್ರಮವನ್ನು ಮತ್ತು ನಿಯಮವನ್ನು ಪ್ರಶ್ನೆ ಮಾಡುತ್ತಾನೆ. ನಿರ್ಧರಿಸಿ.

b) Karan, the pititioner and an employee of the company of Government of India undertaking was dismissed from service. The order of dismissal was issued by the Managing Director of the Company, who was the deciding authority under the regulation framed by the company.

Mr. Karana filed an appeal against the order of the deciding authority before the Board of Directors of the Company. The Managing Director Participated in the deliberations of the Board and the Board dismissed the appeal. Mr. Karan challenged the action of M.D and the Board. Will he succeed ? Decide.

ಕರಣ್ ಎಂಬುವನು ಅರ್ಜಿದಾರನಾಗಿದ್ದು ಆತನು ಕೇಂದ್ರ ಸರಕಾರದ ಸಂಸ್ಥೆಯ ನೌಕರನಾಗಿರುತ್ತಾನೆ. ಆತನನ್ನು ಸಂಸ್ಥೆಯ ಆಡಳಿತ ನಿರ್ದೇಶಕರು ಸೇವೆಯಿಂದ ವಜಾ ಮಾಡುತ್ತಾರೆ. ಸಂಸ್ಥೆಯ ನಿಯಮಾವಳಿಗಳ ಪ್ರಕಾರ ಶಿಸ್ತು ಕ್ರಮ ಜರಗಿಸಲು ಅಧಿಕಾರವಿರುತ್ತದೆ. ತದನಂತರ ವಜಾಗೊಂಡ ನೌಕರನು ಕಂಪೆನಿಯ ಆಡಳಿತ ಮಂಡಳಿಗೆ ಈ ಆದೇಶದ ವಿರುದ್ಧ ಮೇಲ್ಮನವಿ ಮಾಡುತ್ತಾನೆ. ಮೇಲ್ಮನವಿ ಮಂಡಳಿಯಲ್ಲಿ, ಆಡಳಿತ ನಿರ್ದೇಶಕರು ಕೂಡ ಸದಸ್ಯರಾಗಿರುತ್ತಾರೆ. ಇವರ ಭಾಗವಹಿಸುವಿಕೆ ಕೂಡ ಇದ್ದು ಆಡಳಿತ ಮಂಡಳಿಯು ಈ ಮೇಲ್ಮನವಿಯನ್ನು ತಿರಸ್ಕರಿಸುತ್ತದೆ. ಕರಣ್ ಸಂಸ್ಥೆಯ ಆಡಳಿತ ನಿರ್ದೇಶಕರು ಮತ್ತು ಆಡಳಿತ ಮಂಡಳಿಯ ತೀರ್ಮಾನವನ್ನು ಪ್ರಶ್ನಿಸುತ್ತಾನೆ. ಅವನು ಗೆಲ್ಲುವನೆ ? ತೀರ್ಮಾನಿಸಿ.

c) An army official didnot obey the lawful command of his superior officer by not accepting the food offered to him. The court martial proceedings were initiated and the sentence of rigorous imprisonment of one year was imposed. He was also dismissed from service with added disqualification that he would be unfit for future employment. The said order was challenged by him. Decide.

ಒಬ್ಬ ಸೇನೆಯ ಅಧಿಕಾರಿಯು ಅವನಿಗೆ ನೀಡಿದ ಆಹಾರವನ್ನು ಸ್ವೀಕರಿಸಿಲ್ಲ ಎಂಬ ಕಾರಣಕ್ಕಾಗಿ ಅವನ ವಿರುದ್ಧ ಹಿರಿಯ ಅಧಿಕಾರಿಯ ಕಾನೂನುಬದ್ಧ ಆದೇಶವನ್ನು ಪಾಲಿಸಿಲ್ಲದ ಕಾರಣವೂ ಸೇರಿ ಒಂದು ಪ್ರಕರಣ ದಾಖಲಿಸುತ್ತಾರೆ. ಸೇನಾ ನ್ಯಾಯಾಲಯವು ವಿಚಾರಣೆ ನಡೆಸಿ ಅವನಿಗೆ ಒಂದು ವರ್ಷದ ಕಠಿಣ ಕಾರಾಗೃಹ ಶಿಕ್ಷೆಯನ್ನು ವಿಧಿಸಿ ಅವನನ್ನು ಹುದ್ದೆಯಲ್ಲಿ ಮುಂದುವರಿಯಲು ಅನರ್ಹ ಎಂದು ಪರಿಗಣಿಸಿ ವಜಾಗೊಳಿಸುತ್ತದೆ. ಆತನು ಈ ತೀರ್ಪನ್ನು ಪ್ರಶ್ನಿಸಲು ಮುಂದಾಗುತ್ತಾನೆ. ತೀರ್ಮಾನಿಸಿರಿ.